**ಒ.ಎಸ್.ನಂ. 207/22**
**ಪಿ. ಡಬ್ಲೂ-1**

**ದಿನಾಂಕಃ 26.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದಃ-**

ಪ್ರತಿವಾದಿ ಜಮೀನಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ದಾವೆ ಸಲ್ಲಿಸಿರುತ್ತೇನೆ. ಸರ್ವೇ ನಂ 47 ರಲ್ಲಿ 3 ಎಕರೆ ಜಮೀನು ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಗೊತ್ತಿಲ್ಲ. ಮುಂದುವರೆದು ನಮ್ಮ ಜಮೀನಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಪಹಣಿಯಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ಬಗರ್ ಹುಕ್ಕುಂ ನಲ್ಲಿ ಸಾಗುವಳಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಬಗರ್ ಹುಕ್ಕುಂ ನಲ್ಲಿ ಸಾಗುವಳಿ ಮಾಡುತ್ತಿದ್ದೇನೆ ಎಂದು ತಾಲ್ಲೂಕು ಕಛೇರಿಗೆ ಕೊಟ್ಟಿರುವ ಅರ್ಜಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಡಿ.ಎಮ್ ಇಬ್ರಾಹಿಂ ಪ್ರತಿವಾದಿಯ ತಾತ. ಪ್ರತಿವಾದಿ ತಾತ ಹೇಗೆ ಗೊತ್ತು ಎಂದರೆ ನಮ್ಮ ಜಮೀನನ್ನು ಅಕ್ರಮವಾಗಿ ಕಬಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅವರು ಸುಮಾರು 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಪ್ರತಿವಾದಿಯ ತಾತ ಬದುಕಿದ್ದ ಕಾಲದಲ್ಲಿ ಅಪ್ಪಣ್ಣ ಬಿನ್ ದಾಸೇಗೌಡ ಎಂಬುವವರಿಂದ 3 ಎಕರೆ ಜಮೀನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಹಬೀಬ್ ಸಾಬ ರವರ ಜಮೀನು ನೋಡಿರುವುದಿಲ್ಲ. ನಾಗೇಗೌಡರ ಜಮೀನು ನೋಡಿರುವುದಿಲ್ಲ. ದೊಡ್ಡೇಗೌಡರ ಮಗ ಕರೀಗೌಡರ ಜಮೀನು ನೋಡಿರುವುದಿಲ್ಲ. ಸದರಿ ಇಬ್ರಾಹಿಂ ರವರು 1971-1972 ನೇ ಸಾಲಿನಲ್ಲಿ ಕರೀಗೌಡರಿಂದ ಜಮೀನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ.

ಬೀರವಾಳ ಅರಸು, ಯದ್ದೆಗೌಡ ಯಾರು ಎಂದು ಗೊತ್ತಿಲ್ಲ. ಯದ್ದೆಗೌಡರಿಂದ 4 ಎಕರೆ ಜಮೀನನ್ನು ಪ್ರತಿವಾದಿ ತಾತ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಆ ರೀತಿ ಒಟ್ಟು 12 ಎಕರೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ಇಬ್ರಾಹಿಂ ಮೃತಪಟ್ಟ ನಂತರ ಅವರ ಹೆಂಡತಿ ಶಾಜಾನ್ ಗೆ ಬಂದಿದ್ದು, ಅವರು ಸ್ವಾಧೀನ ಇರುತ್ತಾರೆ ಎಂದರೆ ಗೊತ್ತಿಲ್ಲ. ಅವರು ಮೃತಪಟ್ಟ ನಂತರ ಅವರ

ಮಗ ಪ್ರತಿವಾದಿ 12 ಎಕರೆ ಜಮೀನನ್ನು ಸ್ವಾಧೀನ ಇದ್ದು ಅವರ ಜಮೀನಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದೇನೆ ಎಂದು ತೋರಿಸಲು ಸರ್ವೇ ನಕಾಶೆ ಹಾಜರುಪಡಿಸಿದ್ದೀರಾ ಎಂದರೆ ಮನೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂ 42 ಕ್ಕೂ ನನಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ದೊಡ್ಡಮ್ಮ ಎಂಬುವವರು OS 205/22 ಪ್ರತಿವಾದಿಯ ವಿರುದ್ಧ ದಾವೆ ಸಲ್ಲಸಿದ್ದರು ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಸುಮಾರು 35-40 ವರ್ಷಗಳಿಂದ ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಪೋಟೋ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಷೆಡ್ಯೂಲ್ ನ ಪೂರ್ವಕ್ಕೆ ತೋರಿಸಿರುವ ಹನುಮಯ್ಯನ ತಂದೆ ಹೆಸರು ಮತ್ತು ಅದರ ಸರ್ವೇ ನಂ ಗೊತ್ತಿಲ್ಲ. ಹನುಮಯ್ಯ ರವರಿಗೆ ಮಂಜೂರಾಗಿರುವ ದಾಖಲೆ ಹಾಜರುಪಡಿಸಿಲ್ಲ. ಪಶ್ಚಿಮಕ್ಕೆ ತೋರಿಸಿರುವ ಶಹಾಜಾನ್ ಮೊಹಮ್ಮದ್ ಆಲಿ ಪ್ರತಿವಾದಿ ತಂದೆ. ಉತ್ತರಕ್ಕೆ ಇರುವ ವೆಂಕಟಸ್ವಾಮಿ ರವರ ಸರ್ವೇ ನಂ ಗೊತ್ತಿಲ್ಲ. ದಕ್ಷಿಣಕ್ಕೆ ತೋರಿಸಿರುವ ದೊಡ್ಡಮ್ಮರ ಸರ್ವೇ ನಂ ಗೊತ್ತಿಲ್ಲ. 3 ಎಕರೆ ಜಮೀನ ಚೆಕ್ಕು ಬಂದಿಯಲ್ಲಿ ಸ್ವಾಧೀನ ಇದ್ದೇನೆ ಎಂದು ತೋರಿಸಲು ಎಸಿ ಮತ್ತು ಡಿಸಿ ರವರ ಆದೇಶ ಪ್ರತಿ ಹಾಜರುಪಡಿಸಿರುತ್ತೆನೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಸ್ವಾಧೀನ ದಲ್ಲಿ ಇಲ್ಲದೇ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪೋಟೋಗಳನ್ನು ಸೃಷ್ಟಿಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಕುಟುಂಬದವರು ದೇವಲಾಪುರ ಹುಂಡಿ ಗ್ರಾಮದಲ್ಲಿ ವಾಸ ಇರುತ್ತೇವೆ. ದಾವಾ ಸ್ವತ್ತಿಗೂ ನಮ್ಮೂರಿಗೂ ಅರ್ಧ ಕಿ.ಮೀ ಆಗುತ್ತದೆ. ನಾನು ಸದರಿ ಗ್ರಾಮದಲ್ಲಿ ವಾಸ ಇರುತ್ತೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. Form No 53 ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನನಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ  ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**